# SPECIMEN

ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ

**SECTION — A / ವಿಭಾಗ — A**

**1.** **ಈ ಕೆಳಗಿನ ವಿಷಯವನ್ನು ಕುರಿತು 300 ಪದಗಳಿಗೆ ಮೀರದಂತೆ ಪ್ರಬಂಧ ರಚಿಸಿ.** **[25]**

ರಾಷ್ಟ್ರೀಯ ಹಬ್ಬಗಳ ಮಹತ್ವ

SPECIMEN

2. ಈ ಕೆಳಗಿನ ಗದ್ಯಭಾಗವನ್ನು ಗಮನವಿಟ್ಟು ಓದಿಕೊಂಡು ಕೊನೆಯಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಕವಿಯ ಸಾಧನೆ ಏನಿದ್ದರೂ ಭಾಷೆಯ ಮೂಲಕವೇ ನಡೆಯಬೇಕು. ಆದರೆ ಅವನ ಸಿದ್ಧಿಯನ್ನೆಲ್ಲ ಭಾಷಾಸಿದ್ಧಿ ಎನ್ನುವುದು ಅಥವಾ ಭಾಷೆಯೊಂದರಲ್ಲೇ ಗುರುತಿಸಲು ಹೊರಡುವುದು ದಾರಿ ತಪ್ಪಿದ ಕೆಲಸವಾಗುತ್ತದೆ. ಏಕೆಂದರೆ ಕವಿ ಅನ್ಯರಿಗಿಂತ ಹೆಚ್ಚು ಸೂಕ್ಷ್ಮ ಸಂವೇದನೆಯನ್ನೂ ಸೃಷ್ಟಿಶಕ್ತಿಯನ್ನೂ ಪಡೆದವನು. ಅದರಿಂದಾಗಿಯೇ ಅವನ ಸಿದ್ಧಿ ಅನುಭವ ಲೋಕದ ಮೇಲೆ ಅವನು ನಡೆಸುವ ಧಾಳಿಯನ್ನೂ, ಇನ್ನೂ ಅವ್ಯಕ್ತವಾಗಿರುವುದನ್ನು ವ್ಯಕ್ತಗೊಳಿಸುವುದನ್ನೂ ಹೊಂದಿಕೊಂಡಿರುತ್ತದೆ. ಒಬ್ಬ ಕವಿಯ ಭಾಷಾ ಸಿದ್ಧಿಯನ್ನು ವಿವೇಚಿಸುವಾಗ ಮುಖ್ಯವಾಗಿ ಎರಡು ಅಂಶಗಳನ್ನು ನೆನಪಿನಲ್ಲಿಡಬೇಕು. ಒಂದು, ಪಂಪ ರನ್ನರಂತೆ ಅನುಭವಲೋಕದ ಮೇಲೆ ಧಾಳಿಯಿಟ್ಟು ಅವರು ಸೃಷ್ಟಿಸಿದ ಅನುಭವಲೋಕಗಳಾದ ಅವರ ಕೃತಿಗಳಿಂದ. ಇನ್ನೊಂದು, ಅನುಭವ ಆಳವಿಸ್ತಾರಗಳೇ ಅಲ್ಲದೆ ಭಾಷೆಯ ಪರಂಪರೆ ಹಾಗೂ ಪ್ರವಾಹಗಳೊಂದಿಗೆ ಬೆರೆತು ಅದರ ಬೆಳವಣಿಗೆಗೆ ಹಾಗೂ ಸಾತತ್ಯಕ್ಕೆ ಕಾರಣವಾದ ಕವಿಗಳ ದೃಷ್ಟಿಯಿಂದ.

ಇಪ್ಪತ್ತನೆಯ ಶತಮಾನದ ಪೂರ್ವಭಾಗ ಕನ್ನಡದ ದೃಷ್ಟಿಯಿಂದ ಅನ್ವೇಷಣೆಯ ಕಾಲ. ವಸ್ತು, ಭಾಷೆ ಮತ್ತು ಛಂದಸ್ಸು ಈ ವಿಷಯಗಳಲ್ಲಿ ಹಲವಾರು ಕವಿಗಳು ನಡೆಸಿದ ಹುಡುಕಾಟ ಕನ್ನಡ ಕಾವ್ಯದ ಇತಿಹಾಸದಲ್ಲಿ ಅತ್ಯಂತ ಪ್ರಮುಖವಾದುದು. ವಸ್ತು ಮತ್ತು ಛಂದಸ್ಸುಗಳ ವಿಸಯವನ್ನುಳಿದು ನಮಗೆ ಪ್ರಸ್ತುತವಾದ ಭಾಷೆಯ ವಿಚಾರವನ್ನಷ್ಟೆ ಇಲ್ಲಿ ಸ್ಥೂಲವಾಗಿ ಗುರುತಿಸಬಹುದು. ಹೊಸಗನ್ನಡದ ಕಣ್ವಮುನಿ ಬಿ.ಎಂ. ಶ್ರೀ ಅವರು ಒಂದು ನಾಟಕವನ್ನು ಇಡಿಯಾಗಿ ಹಳಗನ್ನಡದಲ್ಲಿ (ಅಶ್ವತ್ಥಾಮನ್) ಮತ್ತೊಂದು ನಾಟಕವನ್ನು ನಡುಗನ್ನಡದಲ್ಲಿ (ಪಾರಸೀಕರು) ಬರೆದುದಲ್ಲದೆ ಕವಿತೆಗಳನ್ನು ಹೊಸಗನ್ನಡದಲ್ಲಿ ಬರೆದರು. ಡಿ.ವಿ.ಜಿ. ಮಂಜೇಶ್ವರದ ಗೋವಿಂದ ಪೈ, ಅಂಬಿಕಾತನಯದತ್ತ, ವಿನಾಯಕ ಇವರುಗಳು ಹಳಗನ್ನಡ, ಹೊಸಗನ್ನಡ, ನಡುಗನ್ನಡ ರೂಪಗಳನ್ನೆಲ್ಲಾ ಕಾವ್ಯದಲ್ಲಿ ಬಳಸಿಕೊಂಡರು. ಡಿ.ವಿ.ಜಿ.ಯವರಲ್ಲಿ ಬರುವ ಸಕಾರ ಹಕಾರಗಳ ಬೆರೆಕೆ, ಪೈ ಅವರ ಅಕ್ಕರೆಯಿಂದಮ್ಮ ನಾಳ್ವೆ ಎಂಬ ಹಾಗೂ ಅಮ್ಮೆವು ಎಂಬಂಥ ಹಳಗನ್ನಡ ಪ್ರಯೋಗ ರೂಪಗಳು ದ.ರಾ.ಬೇಂದ್ರೆಯವರ ಇಂಗಿಸೆ, ಕಂಗಳಂ ಎಂಬಂಥ ಹಳಗನ್ನಡ ರೂಪಗಳು ವಿನಾಯಕರಲ್ಲಿ ಬಂದಿರುವ ಮಾಡಿದನನೆ, ನೋಂತೆವು, ಅರಿತೆವು ಹಾಗೂ ಒಳ ಎಂಬ ರೀತಿಯ

SPECIMEN

ಪ್ರಯೋಗಗಳು ಕನ್ನಡ ಕಾವ್ಯದ ಭಾಷೆ ನಡೆದು ಬಂದ ದಾರಿಯ ಕೆಲವು ಗುರುತುಗಳನ್ನು ಸೂಚಿಸುತ್ತವೆ. ಕುವೆಂಪು ಅವರ ಕಾವ್ಯ ಭಾಷೆಯನ್ನು ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಒಂದು ಗುಣ ವಿಶದವಾಗುತ್ತದೆ. ಅವರ ಕಾವ್ಯಭಾಷೆ ಪ್ರಧಾನವಾಗಿ ಕಥನದ ಭಾಷೆ; ಭಾವಗೀತೆಯ ಭಾಷೆಯಲ್ಲ. ಇದಕ್ಕೆ ಕಾರಣಗಳನ್ನೇನೂ ಹುಡುಕಬೇಕಾಗಿಲ್ಲ. ಅವರ ಕೃತಿ ಸಮುದಾಯವನ್ನು ಸರಿಶೀಲಿಸಿದರೆ ಸಾಕು ವ್ಯಕ್ತವಾಗುತ್ತದೆ. ಅವರ ಪ್ರತಿಭೆ ನಾಟಕೀಯ ಪ್ರತಿಭೆ, ಭಾವಗೀತೆ ಪ್ರತಿಭೆ ಆಗುವುದಕ್ಕಿಂತ ಹೆಚ್ಚು ಸಹಜವಾಗಿ ಕಥನ ಪ್ರತಿಭೆಯಾಗಿದೆ. ಎಲ್ಲೆಲ್ಲಿ ಕಥೆ, ಕಥನ ಉಂಟೋ ಅಲ್ಲೆಲ್ಲಾ ಕುವೆಂಪು ಅವರ ಪ್ರತಿಭೆ ಅಪೂರ್ವವಾಗಿ ವಿಜೃಂಭಿಸುತ್ತದೆ. ಅವರ ಕಲ್ಕಿ ಅಥವಾ ಕುಮಾರವ್ಯಾಸದಂಥ ಕವಿತೆಗಳನ್ನು ನೋಡಿದರೂ ಅವು ಕಥನಾತ್ಮಕವಾಗಿಯೇ ವಿಜೃಂಭಿಸಿ ಬಿಡುತ್ತದೆ.

ಕುವೆಂಪು ಅವರ ಶ್ರೀರಾಮಾಯಣದರ್ಶನಂ ಕುರಿತು ಹೇಳುವಾಗ ತೀ.ನಂ.ಶ್ರೀ ಅವರು ಆ ಬಗ್ಗೆ ಮಹಾಕವಿ, ಮಹಾಕಾವ್ಯ ಮತ್ತು ಮಹಾಛಂದಸ್ಸು ಎಂದು ಉದ್ಗರಿಸಿದ್ದುಂಟು. ಆ ಜೊತೆಗೆ ಮಹಾಭಾಷೆ ಎಂಬ ಇನ್ನೊಂದು ಪದ ಪುಂಜವನ್ನು ಸೃಷ್ಟಿಸಬೇಕೇನು ಎಂದೊಬ್ಬರು ವ್ಯಂಗ್ಯವಾಗಿ ಹೇಳಿದ್ದು ಉಂಟು. ಅಲ್ಲಲ್ಲಿ ಕೀರ್ತಿಶನಿ, ಯಶೋಲಕ್ಷ್ಮಿ, ಕಂಸಶಿಲೆ ಇಂಥ ರೂಪಕಗಳಿಂದ ಕೂಡಿರುತ್ತಿದ್ದ ಕುವೆಂಪು ಅವರ ಭಾಷೆ ಸುನೀತಗಳಲ್ಲಿ ಆಗಲೆ ಸಾಕಷ್ಟು ಸಂಸ್ಕೃತ ಪದ ಭೂಯಿಷ್ಠವಾಗುತ್ತಿತ್ತು. ಶ್ರೀ ರಾಮಾಯಣ ದರ್ಶನದಲ್ಲಿ ಇಂಥ ಪದಮುಂಜಗಳಿವೆ. ಪಂಕಜ, ಶಂಕರಚರಣ ಶರಣ, ಅಕ್ಷಿಪಕ್ಷಿ, ಪ್ರಿಯತಮಾ ಪಿಶಾಚಿನಿ ಕೈಕೆ, ರೂಪಪಾಪ, ಬಂಡೆ ಮಂಡೆಯಗದೆ, ರಾಕ್ಷಸ ಪ್ರಣಯ ವಿದ್ಯಾಸಾರಸರ್ವಸ್ವೆ, ಕನಕಲಂಕೆ, ಹೂಹಗುರ, ಗುರುಭಾರ, ಹೋರಿ ಹೇರಾನೆ, ಬೆಂಕಿ ಸಂಕೋಲೆ, ಮದನ ಧೈರ್ಯದ್ರುಮ, ಪ್ರೇಮರಾಹು, ಭೀತಿಭೂತಂ, ಯಶೋದೀಪ್ತಿ, ನೇತ್ರ ತೀರ್ಥಾಂಬು, ವಜ್ರನಿದ್ರೆ, ಕೀರ್ತಿಶನಿ, ಕಂಸಶಿಲೆ ಈ ರೂಪಕ ಶಬ್ದ ಚಲಾವಣೆ ಕುವೆಂಪು ಅವರ ಸುನೀತಗಳಲ್ಲಿ ಹೆಚ್ಚಾದದ್ದು. ರಾಮಾಯಣದಲ್ಲಿ ಸಹಜ ಪ್ರಯೋಗ ಎಂಬಂತೆ ವಿಪುಲವಾಗಿದೆ. ಈ ರೂಪಕ ಶಬ್ದ ಚಲಾವಣೆ ಅವರ ರಾಮಾಯಣ ಕಾವ್ಯಭಾಷೆಯ ಮೊದಲ ಲಕ್ಷಣ ಎನ್ನಬೇಕು. ಮಹಾಕಾವ್ಯದ ವಿಸ್ತಾರವನ್ನು ಗಮನಿಸಿದರೆ ರೂಪಕ ಶಬ್ದ ಚಲಾವಣೆಯ ಸೊಗಸು ವಿಶದವಾದೀತು.

SPECIMEN

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. [5 × 5 = 25]

**(a)** ಕವಿಯಾದವನು ಸೂಕ್ಷ್ಮಸಂವೇದನಾಶೀಲನಾಗಿರುತ್ತಾನೆಂಬುದನ್ನು ವಿವರಿಸಿ.

ಉತ್ತರ: ______________________________

**(b)** ಕವಿಯೊಬ್ಬನ ಭಾಷಾ ಸಿದ್ಧಿಯನ್ನು ವಿವರಿಸುವಾಗ ಗಮನಿಸಬೇಕಾದ ಅಂಶಗಳೇನು?

ಉತ್ತರ: ______________________________

**(c)** ಕನ್ನಡದ ದೃಷ್ಟಿಯಿಂದ 20ನೇ ಶತಮಾನದ ಪೂರ್ವಭಾಗ "ಅನ್ವೇಷಣೆಯ ಕಾಲ". – ವಿಶದಪಡಿಸಿ.

ಉತ್ತರ: ______________________________

**(d)** "ಕುವೆಂಪುರವರ ಕಾವ್ಯಭಾಷೆ, ಕಥನದ ಭಾಷೆ" ಹೇಗೆ? ಸ್ಪಷ್ಟಪಡಿಸಿ.

ಉತ್ತರ: ______________________________

**(e)** 'ಶ್ರೀ ರಾಮಾಯಣದರ್ಶನಂ' ಕುರಿತು ತೀ.ನಂ.ಶ್ರೀಯವರ ಉದ್ಗಾರದ ಮಾತುಗಳೇನು? ವಿಶ್ಲೇಷಿಸಿ.

ಉತ್ತರ: ______________________________